

# ಕಬಡ್ಡಿಗೆ ಈಗ ಸ್ವರ್ಣಯುಗ!

ಏಷ್ಯನ್ ಕ್ರೀಡಾಕೂಟ, ವಿಶ್ವಕಪ್ ಹೀಗೆ ಅಂತರರಾಷ್ಟ್ರೀಯ ಮಟ್ಟದ ಕೂಟಗಳಲ್ಲಿ ಭಾರತದ ಕಬಡ್ಡಿ ತಂಡ ವಿಜೃಂಭಿಸಿದರೂ ಆಟಗಾರರನ್ನು ಯಾರೂ ಹೆಚ್ಚು ಗುರುತಿಸುತ್ತಿರಲಿಲ್ಲ. ಆದರೆ ಪ್ರೊ ಕಬಡ್ಡಿ ಶುರುವಾದ ಮೇಲೆ ಒಬ್ಬ ಕ್ರಿಕೆಟಿಗ ಪಡೆಯುವಷ್ಟೇ ಸಂಭಾವನೆ ಮತ್ತು ಪ್ರಚಾರ ಕಬಡ್ಡಿ ಆಟಗಾರನಿಗೂ ಲಭಿಸುತ್ತಿದೆ.

■ ಜಿ. ಶಿವಕುಮಾರ




ರೋಹಿತ್ ಕುಮಾರ್







**ಭಾ**ರತದ ಕ್ರಿಕೆಟ್ ಲೋಕದಲ್ಲಿ ಐಪಿಎಲ್ ಹೊಸ ಕ್ರಾಂತಿಯನ್ನೇ ಹುಟ್ಟು ಹಾಕಿರುವುದು ಈಗ ಇತಿಹಾಸ. ಈ ಲೀಗ್‌ನ ಯಶಸ್ಸು, ಫುಟ್‌ಬಾಲ್. ಕಬಡ್ಡಿ, ಬ್ಯಾಡ್ಮಿಂಟನ್ ಮತ್ತು ಹಾಕಿ ಕ್ರೀಡೆಗಳ ಮೇಲೂ ಪ್ರಭಾವ ಬೀರಿದೆ. ಬೇರೆ ಎಲ್ಲಾ ಲೀಗ್‌ಗಳಿಗಿಂತಲೂ ಕಬಡ್ಡಿ ಈ ದಿಸೆಯಲ್ಲಿ ವಿಭಿನ್ನ ಹೆಜ್ಜೆ ಇಟ್ಟಿದೆ.

ಭಾರತದಲ್ಲಿ ಕಬಡ್ಡಿಗೆ ವಿಶಿಷ್ಟ ಪರಂಪರೆ ಇದೆ. 90ರ ದಶಕದಿಂದಲೂ ಏಷ್ಯನ್ ಮತ್ತು ದಕ್ಷಿಣ ಏಷ್ಯನ್ ಕೂಟಗಳಲ್ಲಿ ಚಿನ್ನದ ಬೇಟೆಯಾಡಿರುವ ನಮ್ಮವರು ವಿಶ್ವಕಪ್‌ನಲ್ಲೂ ಪ್ರಶಸ್ತಿ ಗೆದ್ದು ಬೀಗಿದ್ದಾರೆ. ಏಷ್ಯನ್ ಕ್ರೀಡಾಕೂಟದಲ್ಲಿ ಭಾರತ ಆಡಿದ ಪ್ರತಿಸಲವೂ ಚಿನ್ನದ ಪದಕವನ್ನೇ ಬೇಯಾಡಿದೆ. ಆದರೂ ಗ್ರಾಮೀಣ ಕ್ರೀಡೆ ಎನಿಸಿಕೊಂಡಿದ್ದ ಕಬಡ್ಡಿ ಜನಮಾನಸದಿಂದ ನಿಧಾನವಾಗಿ ದೂರವಾಗುತ್ತಿತ್ತು. ಆಗ ಜೀವಸೆಲೆಯಂತೆ ಬಂದಿದ್ದು ಪ್ರೊ ಕಬಡ್ಡಿ ಲೀಗ್.

ಮಷಾಲ್ ಸ್ಪೋರ್ಟ್ಸ್ ಸಂಸ್ಥೆ, ವೀಕ್ಷಕ ವಿವರಣೆಕಾರ ಚಾರು ಶರ್ಮಾ ಮತ್ತು ಲೆಕ್ಸ್ ಆ್ಯಂಡ್ ಲೀಗಲ್ ಸರ್ವಿಸಸ್‌ನ